ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

21

ಇಲಾಖೆ / ವಿಷಯ : DEPARTMENT / SUBJECT: ಡ್ರಗ್ ಮಾಫಿಯಾ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 10/9/2020

ವಿ.ಕ

# ಶ್ರೀಲಂಕಾ ಕ್ಯಾಸಿನೊಗಳಿಗೆ ಸೆಲೆಬ್ರಿಟಿಗಳೇ ಏಜೆಂಟ್!


■ **ಗಿರೀಶ್ ಕೋಟೆ** ಬೆಂಗಳೂರು

girish.k@timesgroup.com




- ಪ್ರತಿಷ್ಠರನ್ನು ದ್ವೀಪರಾಷ್ಟ್ರದತ್ತ ಸೆಳೆದರೆ ಮಾಲೀಕರಿಂದ ಕಮಿಷನ್
- ಕಪ್ಪು ಹಣ, ಭೂಗತ ಜಗತ್ತು, ಡ್ರಗ್ ಜಾಲ ಸಿಂಡಿಕೇಟ್
- ಕ್ಯಾಸಿನೊಗೆ ಹೋದವರು ಗೆದ್ದು ಬಂದಿರುವ ಉದಾಹರಣೆಯೇ ಇಲ್ಲ

ನಿನ್ನೆ ಮೊನ್ನೆವರೆಗೂ ರಾಜ್ಯದ ರಾಜಕಾರಣಿಗಳು, ಉದ್ಯಮಿಗಳು, ಶ್ರೀಮಂತರ ಮಕ್ಕಳಿಗೆ ಶ್ರೀಲಂಕಾ ಪ್ರವಾಸ ಪ್ರತಿಷ್ಠೆಯ, ಹೆಮ್ಮೆಯ ಸಂಗತಿ ಆಗಿತ್ತು. ನೆನಪಿಸಿಕೊಂಡಾಗಲೆಲ್ಲಾ-ಮೈ ಮುರಿಯಬೇಕು ಅನ್ನಿಸಿದಾಗಲೆಲ್ಲಾ ಒಂದೇ ಒಂದು ಫೋನ್ ಕರೆ ಮಾಡಿದರೂ ಸಾಕಿತ್ತು. ಕಾಲಿನ ಪಾದ ನೆಲಕ್ಕೆ ತಾಗದಂತೆ ಮನೆ ಬಾಗಿಲಿಗೇ ಐಷಾರಾಮಿ ಕಾರು ಬಂದು ಹತ್ತಿಸಿಕೊಳ್ಳುತ್ತಿತ್ತು. ಸೀದಾ ವಿಮಾನ ನಿಲ್ದಾಣಕ್ಕೆ ಕರೆದೊಯ್ದು ಉಚಿತ ಟಿಕೆಟ್‌ನಲ್ಲಿ ವಿಮಾನ ಹತ್ತಿಸುತ್ತಿತ್ತು. ಶ್ರೀಲಂಕಾ ವಿಮಾನ ನಿಲ್ದಾಣಕ್ಕೆ ಕಾಲಿಡುವ ಮೊದಲೇ ಕಾದು ನಿಂತಿರುವ ಐಷಾರಾಮಿ ಕಾರು ಮೊದಲೇ ಕಾಯ್ದಿರಿಸಿದ್ದ ಪಂಚತಾರಾ ಹೋಟೆಲ್‌ನ ಐಷಾರಾಮಿ ಕೊಠಡಿ ತಲುಪಿಸುತ್ತಿತ್ತು. ಅಲ್ಲಿ ತಲುಪಿದ ಮೇಲೆ ಪ್ರತಿಯೊಂದು ಸೇವೆಗೂ ಸೆಲೆಬ್ರಿಟಿಗಳು, ನಾನಾ ದೇಶದ ಮಾಡೆಲ್‌ಗಳು ಹಾಜರಿರುತ್ತಿದ್ದರು!

**ಇಂಥದೊಂದು ಐಷಾರಾಮಿ ಉಚಿತ**

ಆತಿಥ್ಯ ಸಿಗಬೇಕೆಂದರೆ ಒಂದೇ ಷರತ್ತು; ಅಲ್ಲಿನ ಕ್ಯಾಸಿನೊಗಳಲ್ಲಿ ಜೂಜಾಡಬೇಕು. ಲಕ್ಷಗಳ ಲೆಕ್ಕದಲ್ಲಿ ಜೂಜು ಕಟ್ಟಬೇಕು. ಎಲ್ಲಾ ರೀತಿಯ ನಶೆಗಳೂ ಉಚಿತವಾಗಿ ಸಿಗುತ್ತವೆ. ಇದೇ ಶ್ರೀಲಂಕಾದ ಆಕರ್ಷಣೆ. ನಟಿಯರಾದ ರಾಗಿಣಿ- ಸಂಜನಾಳನ್ನು ಡ್ರಗ್ ಜಾಲದ ಭಾಗವಾಗಿ ಬಂಧಿಸಿರುವ ಸಿಸಿಬಿ ಅಧಿಕಾರಿಗಳಿಗೆ ಇದೆಲ್ಲಾ ಗೊತ್ತಿಲ್ಲದ ಸಂಗತಿಗಳೇನಲ್ಲ. ಸಿಸಿಬಿಯಲ್ಲಿರುವ ಪ್ರತಿಯೊಬ್ಬರಿಗೂ ಈ ಬಗ್ಗೆ ಇಂಚಿಂಚೂ ಗೊತ್ತಿರುವ ಸಂಗತಿಯೇ.

ಪ್ರವಾಸೋದ್ಯಮವನ್ನೇ ಪ್ರಮುಖ ಆದಾಯವಾಗಿಸಿಕೊಂಡಿರುವ ಶ್ರೀಲಂಕಾ ಬೆಂಗಳೂರಿನ ಪ್ರತಿಷ್ಠಿತರ ಪಾಲಿಗೆ ಬ್ಯಾಂಕಾಕ್. ಅಲ್ಲಿನ ರೆಸಾರ್ಟ್, ಕ್ಯಾಸಿನೊ ಮತ್ತು ಕ್ಲಬ್‌ಗಳಲ್ಲಿ ಹರಿದಾಡುತ್ತಿರುವುದು ಬೆಂಗಳೂರಿನ ಪ್ರತಿಷ್ಠಿತರ ಕಪ್ಪುಹಣ. ಗೋವಾ ಅಥವಾ ಶ್ರೀಲಂಕಾಗೆ ಹಾರುವ ಬೆಂಗಳೂರಿನವರಿಂದಲೇ ಕ್ಯಾಸಿನೊಗಳಿಗೆ ತಿಂಗಳಿಗೆ ನೂರು ಕೋಟಿ ರೂ.ಗೂ ಅಧಿಕ ಆದಾಯವಿದೆ. ಕಪ್ಪು ಹಣದ ಪ್ರತಿಷ್ಠಿತರನ್ನು ತನ್ನ ಕಡೆ ಸೆಳೆಯಲು ಕ್ಯಾಸಿನೊ ಮಾಲೀಕರಿಗೆ ಕಮಿಷನ್ ಏಜೆಂಟರಾಗಿ ಕೆಲಸ ಮಾಡುತ್ತಿರುವವರು ಸೆಲೆಬ್ರಿಟಿಗಳು.

'ಸೀ ಯು ಇನ್ ಐಲ್ಯಾಂಡ್' ಎನ್ನುವ ಮೆಸೇಜ್ ಸೆಲೆಬ್ರಿಟಿಗಳಿಂದ ಬಂತೆಂದರೆ ಬೆಂಗಳೂರಿನ ಕಪ್ಪು ಹಣದ ಕುಳಗಳು ಕಂತೆ ಹತ್ತುತ್ತಾರೆ. ಇಲ್ಲಿಂದ ಹೋದವರು ಕ್ಯಾಸಿನೊದಲ್ಲಿ 50 ಲಕ್ಷ ರೂ. ಜೂಜಾಡಿದರೆ ಅದರಲ್ಲಿ ಶೇ 10ರಿಂದ 40ರ ವರೆಗೂ ಸೆಲೆಬ್ರಿಟಿಗಳಿಗೆ ಕಮಿಷನ್ ಸಿಗುತ್ತದೆ. ಈ ಲಾಭಕ್ಕಾಗಿಯೇ ಒಂದು ವಾರಕ್ಕೆ 50 ಲಕ್ಷದಿಂದ 3 ಕೋಟಿ ರೂ.ವರೆಗೂ ಖರ್ಚು ಮಾಡುವ ಕುಳಗಳನ್ನು ಹುಡುಕಲಾಗುತ್ತದೆ. ಬೆಂಗಳೂರಿನಲ್ಲಿ ಖುಲ್ಲಂ ಖುಲ್ಲಾ ಮೋಜು ಮಸ್ತಿ ಎನ್ನುವ ಕಾರಣಕ್ಕೆ ಇವರು ಶ್ರೀಲಂಕಾವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ.

**ಬೆಂಗಳೂರಿನವರ ಹೂಡಿಕೆ:** ಮೂಲಗಳ ಪ್ರಕಾರ, ಬೆಂಗಳೂರಿನ ಹಲವು ರಾಜಕಾರಣಿಗಳು, ಹಾಲಿ- ಮಾಜಿ ಸಚಿವರ ಕಪ್ಪು ಹಣ ಈ ಕ್ಯಾಸಿನೊಗಳಲ್ಲಿ ಹೂಡಿಕೆಯಾಗಿದೆ. ಲೈಸನ್ಸ್ ಪಡೆಯಲು ನೂರು ಕೋಟಿ ರೂ. ಅಲ್ಲಿನ ಸರಕಾರಕ್ಕೆ ಕೊಡಬೇಕು. ಪೊಲೀಸರಿಗೆ ಯಾವುದೇ ಮಾಮೂಲು ಕೊಡುವಂತಿಲ್ಲ. ಬದಲಿಗೆ ಪೊಲೀಸರ ರಕ್ಷಣೆಯಲ್ಲೇ ಬೇಕಾದ ಕಿಕ್ ಏರಿಸಿಕೊಳ್ಳಬಹುದು. ಕ್ಯಾಸಿನೊಗಳಲ್ಲಿ ಪಾಲುದಾರರಾಗಿರುವ ಬೆಂಗಳೂರಿನ ಕಪ್ಪು ಹಣದ ಕುಳಗಳು ಅಲ್ಲೇ ನೂರಾರು ಕೋಟಿ ರೂ. ಮೌಲ್ಯದ ಆಸ್ತಿ ಖರೀದಿಸುತ್ತಿದ್ದಾರೆ. ಕಾರ್ಖಾನೆಗಳ ಮಾಲೀಕರೂ ಆಗಿದ್ದಾರೆ!

**ಡ್ರಗ್ ಪೆಡ್ಲರ್‌ಗಳು**

ಶ್ರೀಲಂಕಾದ ಕ್ಯಾಸಿನೊಗಳಲ್ಲಿ ಎಲ್ಲಾ ದೇಶಗಳ ಡ್ರಗ್ ಮಾಫಿಯಾದ ಕೊಂಡಿಗಳಿವೆ. ಕನ್ನಡದ ಸೆಲೆಬ್ರಿಟಿಗಳು ಮಾತ್ರವಲ್ಲ, ಹಲವು ದೇಶಗಳ ಸೆಲೆಬ್ರಿಟಿಗಳು, ಮಾಡೆಲ್‌ಗಳನ್ನು ಐಲ್ಯಾಂಡ್‌ಗೆ ಕರೆಸುವ ಸಾಮರ್ಥ್ಯ ಡ್ರಗ್ ಮಾಫಿಯಾಗೆ ಇರುತ್ತದೆ. ಭೂಗತ ಜಗತ್ತಿನ ಆಶ್ರಯವೂ ಇರುವುದರಿಂದ, ಪ್ರತಿ ಚುನಾವಣೆಯಲ್ಲೂ ಭೂಗತ ಜಗತ್ತಿನ ನೆರವನ್ನು ರಾಜಕಾರಣಿಗಳು ಪಡೆಯುವುದರಿಂದ ಇವೆಲ್ಲವೂ ಸೇರಿ ಒಂದು ಸುಭದ್ರ ವ್ಯವಸ್ಥೆಯಾಗಿ